ಮೆಲ್ಲಕ ಸೌಂಡುಬುಟ್ಟು ಪ್ಯಾಶನ್ ಟೀವಿ ಹಚ್ಚಿದ. ಟೀವ್ಯಾಗ ಬೋಟು ಜಡೆವು, ಮೋಟು ಜಡೆವು, ಬಳ್ಳೊಳ್ಳಿ ತುರುಬಿನವು, ಕೋಳಿ ಪುಚ್ಚದವು, ಮುಲ್ಲಂಗಿ ಜಡಿವು ಕೂದಲಿಗೆ ಸುಡುಗಾಡು ಬಣ್ಣಚ್ಚಿ ತೊಡಿ, ಎದಿ ಕಾಣಿಸುತ್ತ ಒಂದರಮ್ಯಾಲೊಂದು ಹಿಂದಮುಂದ ಬೆಕ್ಕು ನಡೆದಂಗ ನಡಿತಿದ್ವು. ನಗುಬಂತು ನಕ್ಕಿದ್ದೆ ತಡ. ಇದೆ ಗಾವೆಂದು ಹರ್‍ಯಾಗಿ ನಡಮ್ಯಾಲೆ ಕೈಯ್ಯಾಕಿದ. ಇವತ್ತು ಬ್ಯಾಡ ಮುಟ್ಟಾಗಿನೆಂತ ದಬ್ಬಿದೆ. ಪಸಕ್ಕನ ಕುಕ್ಕುರುಗಾಲಿಲೆ ಕೂತು 'ಅವತ್ತು ಹುಣ್ವಿ... ಇವತ್ತು ಮುಟ್ಟಾಗಿನಂತ ನಾಟ್ಕ ಎಬ್ಸಿಯಾ...' ಅಂತ ದಿಂಡಿನಂಥ ತೊಡಿನ ಜಾಲಿಕೊರಡಿನಂಗ ತೊಡಿಮ್ಯಾಲೆ ಸರಕ್ಕನ ಎಳ್ಕಂದು ಅನುವು ಮಾಡಿಕೊಂಡ. ಕೊಸರಾಡಿದೆ. ಬಿಡಲಿಲ್ಲ. ತೂತುಗುಂಡಿಲೆ ಕುಂತವನು ಒಮ್ಮಿಗೆ ಉದ್ದಕಬಿದ್ದು ಬೊಗಸೆ ಕೈಲಿ ಬೋಳುತಲಿನ ಗಟ್ಟಿಗಿ ಹಿಡಕಂದು 'ಬೋಳುಗುಂಡಿ... ಬೋಳುಗುಂಡಿ...' ಅಂತ ಕೊಕಾಸಿ ನಕ್ಕು 'ಈ ತೆಂಗಿನ ಕಾಯಾಗ ನೀರು ಬರವಲ್ವು...' ಅಂತ ಬೋಳುತಲಿನ ಠಣ್‌ಠಣ್ ಅಂತ ಕುಟ್ಟಿ ಹಿಜಿಮಿಜಿ ಮಾಡಿದ. ಸಿಟ್ಟೆಂಬುದು ಮೈಸುಟ್ಟು ತಲಿನರ ಸಿಡಿದಂಗಾತು. ಸತುವುಮಾಡಿ ಎದಿಗೆ ಕಾಲುಕೊಟ್ಟು ಹಿಂದಕ ದಬ್ಬಿದೆ. ರಕ್ತ ಕಣ್ಣಿಕಣ್ಣಿ ಚಿಮ್ಮಿತು... ಎಪ್ಪಾ... ಎವ್ವಲೇ! ಅಂತ ಮುಟ್ಟುಬಟ್ಟೆಲೆ ತಿಕ್ಕಿ ಹೋಳುಮಗ್ಗಲು ಮಲಿಗಿದೆ. ಹರ್‍ಗ ತಣ್ಣನ ಗಾಳಿ ಬೀಸುತಿತ್ತು. ಜಗಲಿಗಿಟ್ಟ ದೀಗಿ ಎಣ್ಣೆ ತೀರಿರಬೇಕು. ಎತ್ತೆತ್ತರ ಕುಣಿದು ಆಗಾಗ ಬೆಳಕು ಮಾಡುತಿತ್ತು. ಈ ಟೀವಿ ಸೌಂಡಿಗೆ, ಸೊಟ್ಟಪುಟ್ಟ ಬೆಳಕಿಗೆ ನಿದ್ದಿ ಹೆಂಗಬಂತೋ ಏನೋ ದೇವರೇ ಬಲ್ಲ.

ಸವತ್ತು ಆಗಿರಬೇಕು. 'ಬಡಬಡ ಬರ್‍ರಿ ಪಟಪಟ್ ತಗರ್‍ರಿ...' ಅಂತ ಮೈಕಿನ್ಯಾಗ ಕೂಗುತ್ತ ಮನ್ಯಾಕ ಬಂದ. ಬಂದವನೇ ಒಂದೇ ಜಪ್ಪಿಗೆ ಊರ ಅಗಸಿ ದಾಟಿಸಿಕೊಂಡು ಹಚ್ಚಹಸ್ರು ತ್ವಾಟದಾಗ ಕರಕೊಂಡು ಹೋದ. ಹಿಂದಿಂದ ಸುಟ್ಟಿ, ಹಂಪವ್ವ, ಸಣ್ಣೀರವ್ವ ತಾವು ಬೋಳೆರಾಗಿ 'ಸವಿತಕ್ಕಗ ಜಾಸ್ತಿ ಕೂದ್ಲ ಬಂದಾವ... ಸವಿತಕ್ಕಗ ಜಾಸ್ತಿ ಕೂದ್ಲ ಬಂದಾವ...' ಅಂತ ಒಂಟಿಕಾಲಲಿ ಅಳುತ್ತ, ಚೀರುತ್ತ ಓಡೋಡಿ ಬಂದವರು ಕತ್ತಲದಾಗ ಮರೆಯಾದ್ರು. ಈಕಡೆ ಕೂದಲೆಣ್ಣಿ ಮಾರೋನು ಹೂ, ಹಣ್ಣು, ಮೊಲ, ಚಿಗರಿ, ನವಿಲು ತುಂಬಿದ ಹಸ್ರು ತ್ವಾಟದಾಗ ಓಡಿಸಿಕೊಂಡು ಬಂದವನೇ ಹಸ್ರು ಪೊದ್ಯಾಗ ಗಪ್ಪನ ಕೂಡಿಸಿದ. ಏನೇನೋ ಪಿಸುಗುಟ್ಟಿ ತೊಡಿಮ್ಯಾಲ ಮಲಿಗಿಸಿಕೊಂಡ. ಆಕಾಶ ಎಂಬೋದು ಬೆಳ್ಳನ ಬಟಾಬಯಲಾಗಿತ್ತು. ಆಕಡೆ ಚಂದ್ರ ಇರಲಿಲ್ಲ. ಈಕಡೆ ಸೂರ್‍ಯನೂ ಇರಲಿಲ್ಲ. ಭೂಮಿ ರಣರಣ ಹೊಡಿತಿತ್ತು. ಜಿನಿಜಿನಿ ಮಳೆಗೆ ಗರಿ ಇಲ್ಲದ ನವಿಲೊಂದು ಕುಣಿದಾಡುತಿತ್ತು. ಕಿವಿನೇ ಇಲ್ಲದ ಬಿಳಿಮೊಲ ಪೊದೆಯಿಂದ ಪೊದೆಗೆ ಚಿನ್ನಾಟ ಆಡುತಿತ್ತು. ಕೊಂಬು ಇಲ್ಲದ ಚಿಗರಿಮರಿ ಹುಲಿಮುಂದ ಚಿನ್ನಾಟವಾಡುತಿತ್ತು. ಇದನ್ನೆಲ್ಲಾ ನೋಡುತ್ತ ಕೂದಲೆಣ್ಣಿ ಮಾರೋನು ಬಾರ್‌ಬಾರ್ ಹುಲಿ ಚಡ್ಡಿಮ್ಯಾಲೆ ಕೂತವನು ತೇಟು ಶಿವನಂಗ ಕಂಡ. ನೆಲಕ್ಕೆ ಚಾಚಿದ ಕಪ್ಪನ ಕೂದಲು ಕೈಬೆರಳಿನಿಂದ ಬಿಡಿಬಿಡಿಸಿ ನವಿರಾಗಿ ಸವರಾಡಿದ. ಎಷ್ಟೋ ದಿನದ ಹೂಬ್ಯಾನಿ ಒಂದೇ ಏಟಿಗೆ ಮುರಿದಂಗಾತು. 'ಏಯ್... ಸವಿ... ಸವಿ... ಅಕ್ಕಮಾದೇವಿಯಂಥ ನಿನ್ ಕೂದಲು ನೋಡಿನೆ ಅವತ್ತಿನಿಂದ ಮಳ್ಳು ಬಂದಾದ... ಈ ನಿನ್ನ ಕತ್ತಲಿನಂಗ ಹಾಸಿದ ಕೂದಲ ಮ್ಯಾಲೆನೆ ಬೆಚ್ಚಗ ಮಲಗಬೇಕನಿಸ್ತದ...' ಅಂತ ಬಾಳದಿನದಿಂದ ಮೀಸಲಿಟ್ಟವನು ಕಾತರಿಸಿ ಬರಗೆಟ್ಟವನಂಗ ಕೂದಲಿಗೆ ಮೆಲ್ಲಕ ಹೂಮುತ್ತು ಕೊಡಾಕ ಮುಂದಾದ. ನಾನೊಂದು ಹೆಣ್ಣಾಗಿ ಆ ಹೂ ಮುತ್ತೊಂದ ಎಂದೆಂದೂ ಕಾಣದವಳಾಗಿ ನಿಜ ಎಂಬಂತೆ ಏನೋ ಗೆದ್ದವಳಂತೆ ಇನ್ನೇನು ಕಾತಿರಿಸುತಿದ್ದೆ... ಬದಿಗೆ ಬಿದ್ದಿದ್ದ ರಾಹುಗಾಲದ ಗಂಡನಂಬೋದು ಪುದುಕ್ಕನ ಎದ್ದು ಕೂತವನು 'ಬೋಳಿ... ಬೋಳಿ...'ಅಂತ ಸಿಕ್ಕಸಿಕ್ಕಲ್ಲಿ ಮೈಕೈ ಕೆದರಿ ಸುಖದ ಕನಸಿನಿಂದ ಎಬ್ಬಿಸಿ ಮತ್ತೆ ಬಾರೆಬೇಲಿಯಂಗ ಕಾಟಕೊಟ್ಟ. 'ಹಾಳಾದೋನೆ ಏನ್ ಗಂಟುಬಿದ್ದಿದ್ದಿ... ಮಲಿಗಿದಾಗ ಒಂದ್ ಛಲೋ ಕನಸು ಕಾಣಾಕು ಬಿಡವಲ್ಲಿ...' ಅಂತ ನಿದ್ದಿಗಣ್ಣೆಲೆ ಬಲಗಾಲಿಲೆ ಜಾಡಿಸಿ ಒದ್ದೆ. ಅಲ್ಲಿ ತಗಲಿತೇನೋ. ಕುಂಯ್‌ಂಥ ಕೆಳ್ಗಬಿದ್ದು ಪೆಕಪೆಕ ಒದ್ದಾಡುತಿದ್ದ. ಗಾಬರಿಗೊಂಡು ಮಂಚದ ಕೆಳಗೆ ನೋಡಿದೆ. ಹೊತ್ತು ಸರಿದಂತೆ ಜಗಲಿಗಿಟ್ಟ ದೀಗಿ ಬಗ್ಗನ ಹಾರಿತ್ತು. ●